		ಕಸಬಾ 2	73	06	00
		ಶಿರಾ	00	00	03
		ಗೌಡಗೆರೆ	66	06	01
		ಕಳ್ಳಂಬೆಳ್ಳ	44	04	01
		ಬುಕ್ಕಪಟ್ಟಣ	73	03	00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1194(1393)

ಸದಸ್ಯರ ಹೆಸರು : ಶ್ರೀ. ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಉತ್ತರಿಸುವವರು : ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ಜಲ ನಿರ್ಮಲ ಯೋಜನೆಗಳೆಷ್ಟು? ಹಾಗೂ ಇವುಗಳು ಯಾವ ಹಂತದಲ್ಲಿವೆ. ಇದಕ್ಕಾಗಿ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು? (ಪೂರ್ಣ ಅಂಕಿ ಅಂಶಗಳಲ್ಲಿ ಒದಗಿಸುವುದು)

ಹೈದರಾಬಾದ್ ಕರ್ನಾಟಕ ಪ್ರದೇಶದ ಜಲ ನಿರ್ಮಲ ಯೋಜನೆಯಡಿಯಲ್ಲಿ ಪ್ರಗತಿಯಲ್ಲಿರುವ ಯೋಜನೆಗಳು ಹಾಗೂ ಅವುಗಳ ಪ್ರಗತಿ ಈ ಕೆಳಕಂಡಂತಿದೆ.

ಹಂತ	ಗುಲ್ಬರ್ಗಾ	ಬೀದರ್	ಕೊಪ್ಪಳ	ರಾಯಚೂರು
ಪ್ರಾಯೋಗಿಕ	9	–	–	–
ಬ್ಯಾಚ್–1	135	–	–	–
ಬ್ಯಾಚ್–2	–	208	53	73
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–1	72	–	–	–
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–2	77	–	–	–
ಬ್ಯಾಚ್–3	185	106	125	49
ಒಟ್ಟು ಕಾಮಗಾರಿಗಳು	469	314	178	122

ಒಟ್ಟು 1083 ಕಾಮಗಾರಿಗಳ ಪೈಕಿ 537 ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದ 546 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮೇಲಿನ ಕಾಮಗಾರಿಗಳಿಗೆ ಕಳೆದ ಒಂದು ವರ್ಷದಿಂದ 37.03 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) ಜಲ ನಿರ್ಮಲ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರಗಳು ಪತ್ತೆಯಾಗಿವೆಯೇ?

ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲ್ಬರ್ಗಾ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜಲ ನಿರ್ಮಲ ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಅವ್ಯವಹಾರಗಳು ಪತ್ತೆಯಾಗಿರುವುದಿಲ್ಲ. ಆದರೆ ರಾಯಚೂರು ಜಿಲ್ಲೆಯಲ್ಲಿ ಬ್ಯಾಚ್-2ರಡಿ ವೈಯಕ್ತಿಕ ಶೌಚಾಲಯ ನಿರ್ಮಿಸುವಲ್ಲಿ ಅವ್ಯವಹಾರಗಳು ಪತ್ತೆಯಾಗಿರುತ್ತವೆ.

ಇ) ಪತ್ತೆಯಾಗಿದ್ದಲಿ ಇದರ ವಿವರಗಳೇನು?

ಬ್ಯಾಚ್-2ರಡಿಯಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮಲ್ಲದಕಲ್ ಗ್ರಾಮದಲ್ಲಿ ವೈಯಕ್ತಿಕ ಶೌಚಾಲಯಗಳು ಸರಿಯಾಗಿ ನಿರ್ಮಿಸದೆ ಇರುವ ಫಲಾನುಭವಿಗಳಿಗೆ ಸಹಾಯಧನವನ್ನು ವಿತರಿಸಲಾಗಿತ್ತು. ಈ ಹಿಂದೆ ಜಿಲ್ಲಾ ನೆರವು ಘಟಕ, ರಾಯಚೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೆರವು ಸಂಸ್ಥೆ ಸ್ಪೆಮ್ ಇವರನ್ನು ಜವಾಬ್ದಾರರನ್ನಾಗಿ ಮಾಡಿ ದುರುಪಯೋಗವಾಗಿರುವ ಮೊತ್ತ ರೂ.3.00 ಲಕ್ಷಗಳನ್ನು ಸಂಸ್ಥೆಗೆ ಪಾವತಿಸಬೇಕಾಗಿದ್ದ ಅಂತಿಮ ಬಿಲ್ಲಿನಲ್ಲಿ ಕಡಿತಗೊಳಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಈ) ಈ ಬಗ್ಗೆ ಎಷ್ಟು ಜನರ ಮೇಲೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಬಗ್ಗೆ ತನಿಖೆ ನಡೆಸಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿ, ಗ್ರಾ.ಪಂ. ಮಲ್ಲದಕಲ್ ಇವರ ವಿರುದ್ಧ ಹಣ ದುರುಪಯೋಗದ ಬಗ್ಗೆ ದೇವದುರ್ಗ ತಾಲ್ಲೂಕಿನ ಗಬ್ಬುರು ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. (ಪ್ರಕರಣದ ಗುನ್ನೆ ನಂ.10/06 ಕಲಂ 409 ರೆ/ವಿ 34 ಐಪಿಸಿ. ದಿನಾಂಕ: 13-02-2006)

ಉ) ಜಲ ನಿರ್ಮಲ ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಜಲ ನಿರ್ಮಲ ಯೋಜನೆಯ ಕೆಲವು ನದಿ ನೀರು ಸರಬರಾಜು ಯೋಜನೆಗಳನ್ನು ಹೊರತುಪಡಿಸಿ ಬಾಕಿ ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಅಂದರೆ ಡಿಸೆಂಬರ್ 2007ರೊಳಗೆ ಮುಕ್ತಾಯಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.